ಅಧ್ಯಕ್ಷರು:- ಅವರ ಭಾಷಣವನ್ನು ನೀವೂ ಕೇಳಿದ್ದೀರಿ, ನಾನೂ ಕೇಳಿದ್ದೇನೆ. This question is already withheld.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ದಯವಿಟ್ಟು ತಾವು ಈ ರೀತಿಯ ತೀರ್ಪು ಕೊಟ್ಟರೆ ಬಹಳ ಕಷ್ಟವಾಗುತ್ತದೆ.

MR. SPEAKER:- It will come up next time. I will protect your interests.

(ಗೊಂದಲ)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕುದೂರ್‌ನಲ್ಲಿ ಉಪಖಜಾನೆ ಮಂಜೂರು ಮಾಡುವ ಬಗ್ಗೆ

1639 ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ತಾಲ್ಲೂಕಿನ ಕುದೂರಿನಲ್ಲಿ ಉಪ ಖಜಾನೆಯನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ.

ಆ) ಇದನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಸಚಿವರು)

(ಅ) ಮತ್ತು (ಆ) : ಉಪಖಜಾನೆ ಮಂಜೂರು ಮಾಡುವ ಬಗ್ಗೆ ಇರುವ ನಿಗದಿತ ಸೂತ್ರಗಳ ಪ್ರಕಾರ ಹಾಗೂ ತಾಲ್ಲೂಕು ಕೇಂದ್ರಸ್ಥಾನದಿಂದ ಹೊರಗಡೆ ಉಪ ಖಜಾನೆಯ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಪರಿಶೀಲಿಸಿ, ಮಾಗಡಿ ತಾಲ್ಲೂಕು ಕುದೂರು ಗ್ರಾಮದಲ್ಲಿ ಉಪ ಖಜಾನೆಯನ್ನು ಮಂಜೂರು ಮಾಡುವುದನ್ನು ಪರಿಶೀಲಿಸಲಾಗುವುದು.

ಮಾರಾಟ ತೆರಿಗೆ ಕುರಿತು.

1659 ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):- ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿ.ಪಿ.ಎಲ್ ಇಂಡಿಯಾ ಇವರಿಂದ ಕರ್ನಾಟಕ ಸರ್ಕಾರಕ್ಕೆ ಎಷ್ಟು ಮಾರಾಟ ತೆರಿಗೆ ಬರುತ್ತಿದೆ;

ಆ) ಇವರು ಸರ್ಕಾರದಿಂದ ನಿವೇಶನ ಪಡೆದಿದ್ದಾರೆಯೇ ಅಥವಾ ಖಾಸಗಿಯವರಿಂದ ಪಡೆದಿದ್ದಾರೆಯೇ? ಇದರ ಬಗ್ಗೆ ಕೂಲಂಕುಷವಾಗಿ ವಿವರ ನೀಡುವುದು;

ಇ) ಈ ಕೈಗಾರಿಕೆಯನ್ನು ಸ್ಥಾಪಿಸಲು ಸರ್ಕಾರದ ಸಹಾಯಧನ ಎಷ್ಟು?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು.)

ಅ) ಮೆ:ಬಿ.ಪಿ.ಎಲ್. ಇಂಡಿಯಾ ಇವರಿಂದ ಕಳೆದ ಮೂರು ವರ್ಷಗಳಿಂದ ಬಂದಿರುವ ಮಾರಾಟ ತೆರಿಗೆ ವಿವರ ಈ ಕೆಳಕಂಡಂತಿದೆ;

1987-88 ರೂ 159.02 ಲಕ್ಷಗಳು

1988-89	-	ರೂ 111.21 ಲಕ್ಷಗಳು
1989-90	-	ರೂ 159.73 ಲಕ್ಷಗಳು

ಆ) ಮೆ:ಬಿ.ಪಿ.ಎಲ್. ಇಂಡಿಯಾ ಇವರಿಗೆ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯು ನಿವೇಶನಗಳನ್ನು ಕೊಟ್ಟಿದೆ. ಈ ಕಂಪನಿಯು ಐದು ಫ್ಯಾಕ್ಟರಿಗಳು ಹಾಗು ಎರಡು ಶಾಖೆಗಳನ್ನೊಳಗೊಂಡಿದೆ, ವಿವರ ಈ ಕೆಳಕಂಡಂತಿದೆ:

1) ಮೆ:ಬಿ.ಪಿ.ಎಲ್. ಸಾನ್ಯೋ ಟೆಕ್ನಾಲಜೀಸ್ ಲಿಮಿಟೆಡ್	- 40,101 ಚದರ ಮೀಟರ್
2) ಮೆ:ಬಿ.ಪಿ.ಎಲ್. ಇಂಡಿಯಾ ಲಿಮಿಟೆಡ್	- 27,853 ಚದರ ಮೀಟರ್
3) ಮೆ:ಬಿ.ಪಿ.ಎಲ್. ಎಲಕ್ಟ್ರಾನಿಕ್ಸ್ ಲಿಮಿಟೆಡ್	- 20,212 ಚದರ ಮೀಟರ್
4) ಮೆ:ಬಿ.ಪಿ.ಎಲ್. ಇಂಡಿಯಾ ಲಿಮಿಟೆಡ್	- 20,195 ಚದರ ಮೀಟರ್
5) ಮೆ:ಬಿ.ಪಿ.ಎಲ್. ಸಾನ್ಯೋ ಲಿಮಿಟೆಡ್	- 30,355 ಚದರ ಮೀಟರ್
6) ಮೆ:ಬಿ.ಪಿ.ಎಲ್. ಸಾನ್ಯೋ ಯುಟಿಲಿಟೀಸ್ ಮತ್ತು ಆಪ್ಟಿಎನ್ಸ್ಸ್ ಪೆ ಲಿಮಿಟೆಡ್	- 30,355 ಚದರ ಮೀಟರ್
7) ಮೆ:ಬಿ.ಪಿ.ಎಲ್. ಇಂಡಿಯಾ ಲಿಮಿಟೆಡ್	- 84,766 ಚದರ ಮೀಟರ್

ಇ) ಇಲ್ಲ.

ರಾಜ್ಯದಲ್ಲಿ ಔಷಧಿಗಳ ಮೇಲಿನ ತೆರಿಗೆ ಕುರಿತು.

1326 ಶ್ರೀ ಕೆ. ಲಕ್ಕಪ್ಪ, (ಕುಣಿಗಲ್ ಕ್ಷೇತ್ರ):- ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೀವರಕ್ಷಕ ಔಷಧಿಗಳು ಹಾಗೂ ಇತರೆ ಔಷಧಿಗಳ ಮೇಲಿನ ತೆರಿಗೆಯ ದರವು ಇತರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಹೆಚ್ಚಾಗಿದೆಯೆನ್ನುವ ಅಂಶ ನೈಜವೇ?

ಆ) ಹಾಗಿದ್ದಲ್ಲಿ ಇದಕ್ಕೆ ವಿವರಗಳು.

ಇ) ಸಾರ್ವಜನಿಕ ಹಿತದೃಷ್ಟಿಯಿಂದ ಔಷಧಿಗಳ ಮೇಲೆ ತೆರಿಗೆ ದರ ಇಳಿಸುವ ಉದ್ದೇಶವೇನಾದರೂ ಸರ್ಕಾರಕ್ಕಿದೆಯೇ?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು)

ಅ) ಜೀವ ರಕ್ಷಕ ಔಷಧಿಗಳಿಗೆ ರಾಜ್ಯದಲ್ಲಿ ತೆರಿಗೆಗಳಿಂದ ವಿನಾಯ್ತಿ ನೀಡಲಾಗಿದೆ. ಇತರೆ ಔಷಧಿಗಳ ಮೇಲಿನ ತೆರಿಗೆ ಶೇಕಡ 10 ಆಗಿರುತ್ತದೆ.

ಆ) ಇತರೆ ರಾಜ್ಯಗಳಲ್ಲಿ ಔಷಧಗಳ ಮೇಲಿನ ತೆರಿಗೆ ದರಗಳು ಕೆಳಕಂಡಂತಿವೆ:

ಮಹಾರಾಷ್ಟ್ರ - ಶೇಕಡ 4.48 (ಶೇಕಡ 12ರ ಸರ್‌ಚಾರ್ಜ್‌ನ್ನು ಒಳಗೊಂಡಂತೆ)

ತಮಿಳುನಾಡು - ಶೇಕಡ 9.24 (ಶೇಕಡ 15ರ ಸರ್‌ಚಾರ್ಜ್‌ನ್ನು ಮತ್ತು ಶೇಕಡ 5ರ ಹೆಚ್ಚುವರಿ ಸರ್‌ಚಾರ್ಜ್ ಒಳಗೊಂಡಂತೆ)

ಕೇರಳ - ಶೇಕಡ 7.88 (ಶೇಕಡ 25ರ ಪೆಚ್ಚುವರಿ ತೆರಿಗೆ ಮತ್ತು ಶೇಕಡ 5ರ ಸರ್‌ಚಾರ್ಜ್ ಒಳಗೊಂಡಂತೆ)

ಆಂಧ್ರಪ್ರದೇಶ - ಶೇಕಡ 6.44 (ಶೇಕಡ 10ರ ಸರ್‌ಚಾರ್ಜ್ ಮತ್ತು ಶೇಕಡ 5ರ ಹೆಚ್ಚುವರಿ ತೆರಿಗೆಯನ್ನೊಳಗೊಂಡಂತೆ)

ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶದಲ್ಲಿ ಜೀವ ರಕ್ಷಕ ಔಷಧಿಗಳಿಗೆ ತೆರಿಗೆ ವಿನಾಯಿತಿ ನೀಡಲಾಗಿದೆ.